# ತುಮಕೂರು ವಿಶ್ವವಿದ್ಯಾನಿಲಯ

ಸಂಖ್ಯೆ:ತುವಿ:ಸಿಬ್ಬಂದಿ:108:2023-24/42 ದಿನಾಂಕ:03.04.2024.

## ಸುತ್ತೋಲೆ

ವಿಷಯ:- ಸರ್ಕಾರಿ ನಿಯಮದಂತೆ 2006 ಏಪ್ರಿಲ್‌ಗೆ ಮೊದಲು ವಿಶ್ವವಿದ್ಯಾನಿಲಯಗಳ ಸೇವೆಗೆ ಖಾಯಂ ನೇಮಕಾತಿ ಹೊಂದಿ, 2006 ತದನಂತರ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಕ್ರಮಬದ್ಧವಾಗಿ ಸಮುಚಿತ ಮಾರ್ಗದಲ್ಲಿ ತತ್ಸಮಾನ ಹುದ್ದೆ/ ಉನ್ನತ ಹುದ್ದೆಗೆ ನೇಮಕಾತಿ ಹೊಂದಿದ ಸಿಬ್ಬಂದಿಗಳನ್ನು ಹಳೇ ಪಿಂಚಣಿ ಯೋಜನೆಗೆ ಪರಿಗಣಿಸುವ ಕುರಿತು.

ಉಲ್ಲೇಖ: 1. ದಿನಾಂಕ:22.12.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:18.03.2024.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ನಿಯಮದಂತೆ 2006 ಏಪ್ರಿಲ್‌ಗೆ ಮೊದಲು ವಿಶ್ವವಿದ್ಯಾನಿಲಯಗಳ ಸೇವೆಗೆ ಖಾಯಂ ನೇಮಕಾತಿ ಹೊಂದಿ, 2006 ತದನಂತರ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಕ್ರಮಬದ್ಧವಾಗಿ ಸಮುಚಿತ ಮಾರ್ಗದಲ್ಲಿ ತತ್ಸಮಾನ ಹುದ್ದೆ/ ಉನ್ನತ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿ ನಿಯಮಾನುಸಾರ ನೇರ ನೇಮಕಾತಿ ಹೊಂದಿರುವ ಮತ್ತು ಅಂತಹವರಿಗೆ ತುಮಕೂರು ವಿಶ್ವವಿದ್ಯಾನಿಲಯ ನೇರ ನೇಮಕಾತಿ ಹೊಂದಿದ ಅವಧಿಯಲ್ಲಿಯೇ ಹಳೇ ಪಿಂಚಣಿ ಯೋಜನೆಗೆ ಒಳಪಟ್ಟಿರುವ ಮತ್ತು ಅವರವರ ಪೂರ್ವ ಮಾತೃ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸಿದ ಅವಧಿಯ Pension Contribution & Leave Contribution (ಕೊಡುಗೆ) ತುಮಕೂರು ವಿಶ್ವವಿದ್ಯಾನಿಲಯಕ್ಕೆ ಜಮಾವಣೆಗೊಂಡಿರುವ ಬೋಧಕರನ್ನು ಮಾತ್ರ ಹಳೇ ಪಿಂಚಣಿಗೆ ಪರಿಗಣಿಸಲು ಉಲ್ಲೇಖ(1)ರನ್ವಯ ಸಿಂಡಿಕೇಟ್ ಸಭೆಯು ನಿರ್ಣಯಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ದಿನಾಂಕ:01.04.2006ರ ಪೂರ್ವದಲ್ಲಿನ ವಿಶ್ವವಿದ್ಯಾನಿಲಯಗಳ ಸೇವೆಗೆ ಖಾಯಂ ನೇಮಕಾತಿ ಹೊಂದಿ, 2006 ತದನಂತರ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಕ್ರಮಬದ್ಧವಾಗಿ ಸಮುಚಿತ ಮಾರ್ಗದಲ್ಲಿ ಉನ್ನತ ಹುದ್ದೆ/ತತ್ಸಮಾನ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿ ನಿಯಮಾನುಸಾರ ನೇರ ನೇಮಕಾತಿ ಹೊಂದಿರುವ ಮತ್ತು ತುಮಕೂರು ವಿಶ್ವವಿದ್ಯಾನಿಲಯ ನೇರ ನೇಮಕಾತಿ ಹೊಂದಿದ ಅವಧಿಯಲ್ಲಿಯೇ ಹಳೇ ಪಿಂಚಣಿ ಯೋಜನೆಗೆ ಒಳಪಟ್ಟಿರುವ ನೌಕರರು ಪೂರ್ವ ಮಾತೃ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸಿದ ಅವಧಿಯ Pension Contribution & Leave Contribution (ಕೊಡುಗೆ) ತುಮಕೂರು ವಿಶ್ವವಿದ್ಯಾನಿಲಯಕ್ಕೆ ಜಮಾವಣೆಗೊಂಡಿರುವ ಕುರಿತು ಮಾಹಿತಿಯನ್ನು ಸೂಕ್ತ ದಾಖಲೆಗಳೊಂದಿಗೆ ಸಿಬ್ಬಂದಿ ವಿಭಾಗಕ್ಕೆ ಸಲ್ಲಿಸಲು ತಿಳಿಯಪಡಿಸಲಾಗಿದೆ.

**"ಕರಡು ಪ್ರತಿಯು ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ."**

**ಆದೇಶದ ಮೇರೆಗೆ,**

03/4/24

ಉಪಕುಲಸಚಿವರು
(ಸಿಬ್ಬಂದಿ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು.

ಗೆ,

1. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಉಪಕುಲಸಚಿವರು, ಖರೀದಿ ಕೋಶ, ಕಾನೂನು ಕೋಶ, ಸಾಮಾನ್ಯ & ಅಭಿವೃದ್ಧಿ ವಿಭಾಗ, ಶೈಕ್ಷಣಿಕ ವಿಭಾಗ, ಪರೀಕ್ಷಾ ವಿಭಾಗ, ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಇಂದೇ ವಿ. ವಿ. ಜಾಲತಾಣದಲ್ಲಿ ಪ್ರಕಟಿಸುವುದು ಹಾಗೂ ಎಲ್ಲಾ ಬೋಧಕ & ಬೋಧಕೇತರ ಸಿಬ್ಬಂದಿಗಳಿಗೆ ಇ-ಮೇಲ್ ಮುಖಾಂತರ ಕಳುಹಿಸುವುದು.
9. ಕಚೇರಿ ಪ್ರತಿ.

ವಿ.ಸೂ.: ಮೇಲ್ಕಂಡ ಅಧಿಕಾರಿಗಳು ತಮ್ಮ ಅದೀನದಲ್ಲಿ ಬರುವ ಎಲ್ಲಾ ಸಿಬ್ಬಂದಿಗಳ ಗಮನಕ್ಕೆ ತಪ್ಪದೇ ತರುವುದು